# ವೇದಾಂತ ಡ್ರಿಪ್

Vedanta™
Irrigation Systems Pvt. Ltd.

ವ್ಯವಸ್ಥಿತ ಆಧುನಿಕ ಕೃಷಿಗೆ ಸಹಜ ಕೃಷಿಯ ಮೆರಗು ನೀಡಬಲ್ಲ, ಬಹುಪಯೋಗಿ ಪದ್ಧತಿಯಾದ, 'ಹನಿ ನೀರಾವರಿ' ಕೃಷಿ ರಂಗವು 20ನೇ ಶತಮಾನದಲ್ಲಿ ಕಂಡ ಪ್ರಮುಖ ತಾಂತ್ರಿಕ ಬೆಳವಣಿಗೆಗಳಲ್ಲಿ ಒಂದು. ನಗರೀಕರಣ, ಕೈಗಾರೀಕರಣ ಮತ್ತು ಹೆಚ್ಚುತ್ತಿರುವ ಜನಸಂಖ್ಯೆಯಿಂದ ಕೃಷಿಯೇತರ ಚಟುವಟಿಕೆಗಳಿಗೆ ನೀರಿನ ಅಭಾವ ಕಾಣುತ್ತಿದೆ. ಅದಲ್ಲದೆ ಮಳೆಯ ಏರುಪೇರು, ಕುಸಿಯುತ್ತಿರುವ ಅಂತರ್ಜಲ ಮಟ್ಟ, ವಿದ್ಯುಚ್ಛಕ್ತಿಯ ಅಭಾವ, ಕೂಲಿ ಆಳುಗಳ ತೀವ್ರ ಕೊರತೆಗಳಿಂದ ಬೆಳೆಯ ಉತ್ಪಾದನೆ ವೆಚ್ಚ ಅಧಿಕವಾಗುತ್ತಿದೆ ಮತ್ತು ಆಹಾರದ ಗುಣಮಟ್ಟ ಕಡಿಮೆಯಾಗುತ್ತಿದೆ. ಈ ಎಲ್ಲಾ ಅನಾನುಕೂಲಗಳಿಗೆ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನವಾದ "ಹನಿ ನೀರಾವರಿ" ಪದ್ಧತಿ ಬಹಳ ಮಹತ್ವದ ಪಾತ್ರ ಪಡೆದುಕೊಂಡಿದೆ.

ಈ ನಿಟ್ಟಿನಲ್ಲಿ **ವೇದಾಂತ ಡ್ರಿಪ್** ಅತ್ಯಾಧುನಿಕ ತಂತ್ರಜ್ಞಾನದಿಂದ ಉತ್ತಮ ಗುಣಮಟ್ಟದ ಸೇವೆ ಸಲ್ಲಿಸಲು ಬಿ.ಐ.ಎಸ್. ಮಾಪಕಗಳನ್ನು ಹೊಂದಿರುವ ವೇದಾಂತ ಡ್ರಿಪ್ ಇರಿಗೇಶನ್ ಉಪಕರಣಗಳನ್ನು ರೈತ ಸಮುದಾಯಕ್ಕೆ ಪರಿಚಯಿಸುತ್ತಿದ್ದು, ರೈತರ ಸೂಕ್ಷ್ಮ ನೀರಾವರಿ ಯೋಜನೆಗಳ ಸಂಪೂರ್ಣ ಅಗತ್ಯತೆಗಳನ್ನು ಪೂರೈಸಲು ಅತ್ಯಂತ ನುರಿತ ಹಾಗೂ ಅನುಭವಿಗಳ ಮನೋಕೌಶಲ್ಯದಿಂದ ಹನಿ ನೀರಾವರಿ ಪೈಪುಗಳ ಉತ್ಪಾದನಾ ಘಟಕವನ್ನು ಸ್ಥಾಪಿಸಿದೆ.

## ಕಂಪನಿಯ ಪ್ರತ್ಯೇಕತೆಗಳು :










- ಉತ್ಕೃಷ್ಟ ಗುಣಮಟ್ಟದ ಕಚ್ಚಾ ಪದಾರ್ಥಗಳನ್ನು ಉಪಯೋಗಿಸಿ ನುರಿತ ತಂತ್ರಜ್ಞಾನದಿಂದ ವೇದಾಂತ ಉಪಕರಣಗಳನ್ನು ತಯಾರಿಸಲಾಗುತ್ತದೆ.
- ಕೃಷಿಯಲ್ಲಿ ಬಳಸುವ ರಾಸಾಯನಿಕಗಳು, ಸೂರ್ಯನಿಂದ ಹೊರಸೂಸುವ ಅತ್ಯಧಿಕ ಯು.ವಿ. ಕಿರಣಗಳಿಂದ ಮತ್ತು ವಾತಾವರಣದಲ್ಲಿ ಉಂಟಾಗುವ ಅತ್ಯಧಿಕ ತಾಪಮಾನವನ್ನು ತಡೆಯುವ ಸಾಮರ್ಥ್ಯ ಹೊಂದಿದೆ.
- ರೈತರಿಗೆ ಕೈಗೆಟುಕುವ ದರದಲ್ಲಿ ವೇದಾಂತ ಉಪಕರಣಗಳು ಲಭ್ಯವಿರುತ್ತದೆ.
- ರೈತರ ಅವಶ್ಯಕತೆಗಳಿಗನುಗುಣವಾಗಿ ಡ್ರಿಪ್ ಸಾಮಗ್ರಿಗಳನ್ನು ತ್ವರಿತವಾಗಿ ಸಲ್ಲಿಸುವುದು.
- ಪ್ರತಿ ಇನ್‌ಲೈನ್ ಡ್ರಿಪ್ಪರ್‌ಗಳಲ್ಲಿ ಏಕರೂಪ ನೀರಿನ ಸರಬರಾಜು.
- ಡ್ರಿಪ್ ಸಾಮಗ್ರಿಗಳನ್ನು ವ್ಯವಸಾಯ ಭೂಮಿಯಲ್ಲಿ ಜೋಡಿಸುವಾಗ ಅವಶ್ಯ ಮುಂಜಾಗ್ರತೆಗಳನ್ನು ತೆಗೆದುಕೊಳ್ಳುವುದು.
- ಎಲ್ಲಾ ಡ್ರಿಪ್ ಸಾಮಗ್ರಿಗಳನ್ನು ಅತ್ಯಾಧುನಿಕವಾದ ಮತ್ತು ಉತ್ತಮ ಗುಣಮಟ್ಟದ ರೀತಿಯಲ್ಲಿ ರೈತರಿಗೆ ಸಲ್ಲಿಸುವುದು.
- ಇನ್‌ಲೈನ್ ಡ್ರಿಪ್‌ನಲ್ಲಿ ನೀರಿನ ಹರಿವಿನ ಸಲುವಾಗಿ ಕ್ಷೇತ್ರ ಹೆಚ್ಚಾಗಿರುವುದರಿಂದ ಲವಣಾಂಶಗಳಿಗೆ ಅಡಚಣೆಯಾಗದೆ ಡ್ರಿಪ್ ಲೈನ್‌ಗಳನ್ನು ದೀರ್ಘಕಾಲದವರೆಗೆ ಉಪಯೋಗ ಮಾಡಬಹುದು.
- ರೈತರಿಗೆ ಅವಶ್ಯವಾದ ವೇದಾಂತ ಡ್ರಿಪ್ ಬಿಡಿಭಾಗಗಳು ವೇದಾಂತ ಡೀಲರ್ಸ್ ಹತ್ತಿರ ಎಲ್ಲಾ ಸಮಯದಲ್ಲಿಯೂ ಲಭ್ಯ.
- ವೇದಾಂತ ಉಪಕರಣಗಳ ಮಾರಾಟದ ನಂತರ ಅತೀ ಉತ್ತಮ ದರ್ಜೆಯ ಗ್ರಾಹಕ ಸೇವೆ.

## ಡ್ರಿಪ್ ಇರಿಗೇಷನ್‌ನ ಉಪಯೋಗಗಳು :






- ಪ್ರತಿದಿನ ಲಭ್ಯವಿರುವ ವಿದ್ಯುತ್‌ನಲ್ಲಿಯೇ ಪ್ರತಿಗಿಡಗಳಿಗೆ ಬೇಕಾಗುವ ನೀರು ಪೂರೈಸಿ ವಿದ್ಯುತ್ ಮತ್ತು ನೀರು ವ್ಯರ್ಥವಾಗದಂತೆ ತಡೆಯುವುದು.
- ಗಿಡಗಳಿಗೆ ಬೇಕಾಗುವ ನೀರನ್ನು ಗಿಡಗಳ ವಯಸ್ಸಿಗನುಗುಣವಾಗಿ ಮಣ್ಣಿನ ಮತ್ತು ವಾತಾವರಣದಲ್ಲಿನ ತೇವಾಂಶ ದೃಷ್ಟಿಯಲ್ಲಿಟ್ಟುಕೊಂಡು ನೀರನ್ನು ಪೂರೈಸುವುದು.
- ಭೂಮಿ ಸಮತಟ್ಟು ಇಲ್ಲದಿದ್ದರೂ ನೀರನ್ನು ಸಮಾನವಾಗಿ ಹರಿಸುವುದು.
- ಅವಶ್ಯವಿರದ ಪ್ರದೇಶದಲ್ಲಿ ನೀರು ವ್ಯರ್ಥವಾಗದಂತೆ 40 ರಿಂದ 60 ಶೇಕಡ ನೀರಿನ ಕೊರತೆ ನಿವಾರಿಸಬಹುದು.
- ವೇದಾಂತ ಡ್ರಿಪ್‌ಗಳಿಂದ ಕೂಲಿ ಖರ್ಚು ಕಡಿಮೆಯಾಗುವುದಲ್ಲದೆ ಉತ್ತಮ ಗುಣಮಟ್ಟದ ಬೆಳೆ ರೈತರು ಪಡೆಯಬಹುದು.
- 20 ರಿಂದ 60 ಶೇಕಡ ಅತ್ಯಧಿಕ ಇಳುವರಿಯನ್ನು ಪಡೆಯುವುದರ ಜೊತೆಗೆ ಶ್ರಮ ಮತ್ತು ಸಮಯ ಉಳಿತಾಯ ಮಾಡಬಹುದು.
- ಗಿಡಗಳಿಗೆ ಬೇಕಾಗುವ ರಸಗೊಬ್ಬರಗಳನ್ನು ಸರಿಯಾದ ಪ್ರಮಾಣದಲ್ಲಿ ಹನಿ ನೀರಾವರಿ ಮುಖಾಂತರ ಕೊಡುವುದರಿಂದ ರಸ ಗೊಬ್ಬರಗಳು ವ್ಯರ್ಥವಾಗುವುದನ್ನು ತಡೆಯಬಹುದು.
- ಕಳೆ ಸಸಿಗಳು ಬೆಳೆಯುವುದನ್ನು ನಿವಾರಿಸಬಹುದು.

IS : 13488 IS : 12786 IS : 13487

**ಕರ್ನಾಟಕ ಸರ್ಕಾರದ ತೋಟಗಾರಿಕೆ, ಕೃಷಿ ಮತ್ತು ರೇಷ್ಮೆ ಇಲಾಖೆಗಳಿಂದ ಮಾನ್ಯತೆ ಪಡೆದಿದೆ.**

## ಇನ್‌ಲೈನ್ ಎಮಿಟಿಂಗ್ ಪೈಪ್ಸ್ (Round & flat)



- 12mm & 16mm ಸುತ್ತಳತೆಯಲ್ಲಿ 30cm, 40cm, 50cm ಮತ್ತು 60cm ಅಂತರಗಳಲ್ಲಿ ಲಭ್ಯವಿದೆ.
- 2LPH ಮತ್ತು 4LPH ನೀರಿನ ಹೊರಸೂಸುವಿಕೆ ಸಾಮರ್ಥ್ಯದಲ್ಲಿ ಲಭ್ಯ.

## ಲ್ಯಾಟರಲ್ಸ್ (Plain)



- ಹೆಚ್ಚು ಕಾಲ ಬಾಳಿಕೆ, ವ್ಯವಸಾಯ ವಿಧಾನ ದೃಷ್ಟಿಯಲ್ಲಿಟ್ಟುಕೊಂಡು ವಿವಿಧ ಸೈಜಿನಲ್ಲಿ ತಯಾರು ಮಾಡಲಾಗಿದೆ.
- 12mm, 16mm & 20mm ಸುತ್ತಳತೆಯಲ್ಲಿ ಲಭ್ಯ.

## ಈಜ್ಜಿ ಡ್ರಿಪ್ ಟೇಪ್ (Paper Drip)



- 16mm ಗಾತ್ರದ ಫ್ಲಾಟ್ ಡ್ರಿಪ್ ಟೇಪ್ 0.2mm ಮತ್ತು 0.4mm wall thickness ನಲ್ಲಿ ಲಭ್ಯವಿರುತ್ತದೆ.
- 500 ಮತ್ತು 1000 ಮೀ. ರೋಲ್‌ಗಳಲ್ಲಿ ಲಭ್ಯವಿರುತ್ತದೆ.

## ಆನ್‌ಲೈನ್ ಡ್ರಿಪ್ಪರ್ಸ್



- 4LPH ಮತ್ತು 8LPH ನೀರಿನ ಹೊರಸೂಸುವಿಕೆ ಸಾಮರ್ಥ್ಯದಲ್ಲಿ ಲಭ್ಯ.
- ಲ್ಯಾಟರಲ್‌ನಲ್ಲಿ ಜೋಡಣೆಗೆ, ನಂತರ ಸ್ವಚ್ಛ ಮಾಡುವುದಕ್ಕೆ ಅನುಕೂಲವಾಗುವಂತೆ ತಯಾರು ಮಾಡಲಾಗಿದೆ.
- ಇದನ್ನು ಪೂರ್ತಿ ಲ್ಯಾಟರಲ್ಸ್‌ನಿಂದ ತೆಗೆಯದೆ ಮೇಲಿನ ಕ್ಯಾಪನ್ನು ತೆಗೆದು ಸ್ವಚ್ಛಪಡಿಸಬಹುದು.

## ಸ್ಕ್ರೀನ್ ಫಿಲ್ಟರ್ ಮತ್ತು ಡಿಸ್ಕ್ ಫಿಲ್ಟರ್‌ಗಳು





- 2", 2.5" ಮತ್ತು 3" ಸಾಮರ್ಥ್ಯಗಳಲ್ಲಿ ಲಭ್ಯವಿರುತ್ತದೆ.
- ದೈನಂದಿನ ನಿರ್ವಹಣೆಗಾಗಿ ತೆರೆಯಲು ಮತ್ತು ಮುಚ್ಚಲು ಸುಲಭವಾಗುವಂತೆ ಬಿಡಿಭಾಗಗಳು ತಯಾರಿಸಲ್ಪಟ್ಟಿದೆ.
- ನೀರಾವರಿಯಿಂದ ಬರುವ ರಾಸಾಯನಿಕ ಮತ್ತು ರಸ ಗೊಬ್ಬರಗಳ ನಿರೋಧಕವಾಗಿದೆ.

## ಹೈಡ್ರೋಸೈಕ್ಲೋನ್ ಫಿಲ್ಟರ್



- 2", 2.5", 3" ಮತ್ತು 4" ಸಾಮರ್ಥ್ಯದ ನಾಮಿನಲ್ ಗಾತ್ರಗಳಲ್ಲಿ ಲಭ್ಯವಿದೆ.
- ಮರಳು, ಹೂಳು ಅಥವಾ ನೀರಿಗಿಂತ ಹೆಚ್ಚು ಗಾತ್ರದ ಕಣಗಳನ್ನು ಬೇರ್ಪಡಿಸಲು ಬಳಸಲಾಗುತ್ತದೆ.

## ಸ್ಯಾಂಡ್ /ಗ್ರಾವೆಲ್ ಫಿಲ್ಟರ್

- ನೀರಿನಿಂದ ಬರುವ ಪಾಚಿ, ಇತರ ಮಲಿನ ಪದಾರ್ಥಗಳು ಮತ್ತು ನೀರಿನಲ್ಲಿ ಕರಗದ ವ್ಯರ್ಥ ಪದಾರ್ಥಗಳನ್ನು ನೀರಿನಿಂದ ಬೇರ್ಪಡಿಸುತ್ತದೆ.
- ಗ್ರಾವೆಲ್ ಫಿಲ್ಟರ್ ಗಂಟೆಗೆ 10, 20, 30 ಮತ್ತು 40$m^3$ ರ ವರೆಗೆ ನೀರನ್ನು ಪೂರೈಸುವ ಸಾಮರ್ಥ್ಯ ಹೊಂದಿದೆ.
- ಗ್ರಾವೆಲ್ ಫಿಲ್ಟರ್ ರೈತರಿಗೆ ಸುಲಭವಾಗಿ ತೆರೆಯುವುದಕ್ಕೆ ಮತ್ತು ಅವರಿಗನುಗುಣವಾಗಿ ಸ್ವಚ್ಛಪಡಿಸುವುದಕ್ಕೆ ಅನುಕೂಲಕರವಾಗಿದೆ.

## ಫರ್ಟಿಲೈಸರ್ ಟ್ಯಾಂಕ್



- ಫರ್ಟಿಲೈಜರ್ ಟ್ಯಾಂಕ್ ಗೊಬ್ಬರವನ್ನು ನೀರಿನಲ್ಲಿ ಕರಗಿಸಿ ಸರಬರಾಜು ಮಾಡುವುದರಿಂದ ಗೊಬ್ಬರ ವ್ಯರ್ಥವಾಗದಂತೆ ಸಮಾನವಾಗಿ ಗಿಡಗಳಿಗೆ ಪೂರೈಸುತ್ತದೆ.
- 30, 60, 90 ಮತ್ತು 120 ಲೀಟರ್ ಸಾಮರ್ಥ್ಯದಲ್ಲಿ ರಸಗೊಬ್ಬರ ಟ್ಯಾಂಕ್ ಲಭ್ಯವಿದೆ.

## ವೆಂಚುರಿ ಇಂಜೆಕ್ಟರ್



- ರಾಸಾಯನಿಕಗಳು ಮತ್ತು ರಸಗೊಬ್ಬರಗಳನ್ನು ನೀರಾವರಿ ಮುಖಾಂತರ ನೇರವಾಗಿ ಸಸ್ಯಗಳ ಮೂಲ ಬೇರುಗಳಿಗೆ ಸರಬರಾಜು ಮಾಡಬಹುದು.
- 3/4", 1", 2" ಮತ್ತು 2.5" ಗಾತ್ರಗಳಲ್ಲಿ ಲಭ್ಯ

## ಬಾಲ್‌ವಾಲ್ವ್ ಮತ್ತು ಡ್ರಿಪ್ ಫಿಟ್ಟಿಂಗ್ಸ್



- ಎಲ್ಲಾ ಗಾತ್ರದ ನೀರಾವರಿ ಕಂಟ್ರೋಲ್ ವಾಲ್ವ್ ಮತ್ತು ಡ್ರಿಪ್ ಫಿಟ್ಟಿಂಗ್ಸ್ ದೊರೆಯುತ್ತದೆ.


**Corporate Office :**

**Vedanta Irrigation Systems Pvt. Ltd.**

Ashmith Arcade, # 162, 3rd Phase, 10th Main, Laggere Main Road,
Next to SBI Bank, Peenya Industrial Area, Bengaluru - 560 058.
E-mail : vedantairrigations@gmail.com | info@vedantairrigation.com
Phone : 080-28374999


Authorised Dealer :